# ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್‌.ಎಸ್‌. ಮೋನಪ್ಪ

## ಸಿದ್ದಣ್ಣ–ನಾಗಣ್ಣ ಹೊಡೆದಾಟ

ನಾಗಣ್ಣ ಕೆಲಸದಲ್ಲಿ ಚುರುಕು. ಎಷ್ಟೇ ಭಾರದ ಕೊಡಗಳನ್ನು ಆತ ಹೊರುತ್ತಿದ್ದ. ಅವನವು ಹೆಗಲಗಳೋ ಇಲ್ಲಾ ತುಂಬಿದ ಕೊಡಗಳನ್ನು ಆಚೀಚೆ ಓಲಾಡದಂತೆ ಹಿಡಿದಿಡುವ ತಕ್ಕಡಿಗಳೋ? ಒಂದು ತೂಕವನ್ನು ಮತ್ತೊಂದು ತೂಕದೊಂದಿಗೆ ಸಮಗಟ್ಟಿಸುವುದು ಅಷ್ಟು ಸುಲಭದ್ದಲ್ಲ! ಬಹುಶಃ ಅದೃಷ್ಟದ ಒನೆದಾಟ ಹೀಗೆಯೇ ಇರಬೇಕು. ನಾಗಪ್ಪ ಇಪ್ಪತ್ತೆರಡರ ತರುಣ. ಅವನಲ್ಲಿ ಎಷ್ಟೊಂದು ಮುಗ್ಧತೆ. ಅವನ ಜೀವನೋತ್ಸಾಹಕ್ಕೆ ಮಾಯಕ್ಕ ಅಚ್ಚರಿಪಡುವವಳು.

‘ಅಲ್ಲೋ ನಾಗಣ್ಣ, ನಿನ್ನ ಹೆಗಲ ಎಷ್ಟೊಂದು ಭಾರ ಹೊರ್ತಾವಲ್ಲೋ, ಖರೇನ ಅವು ಉಕ್ಕಿನವು ಇರಬೇಕು. ಚರ್ಮದ್ದು ಆಗಿದ್ರ ಇಷ್ಟೊತ್ತಿಗೆ ಸವದು ಹೋಗಿರತಿದ್ವು. ಅಲ್ಲೊ ನಾಗು, ದೊಡ್ಡ ದೊಡ್ಡ ನೀರಿನ ಕೊಡ ಹೊರ್ತಿ. ನಾಲ್ಕು ಮಂದಿ ಎತ್ತೂವಂಥ ಹುಲ್ಲಿನ ಹೊರಿ ಒಬ್ಬನ ಹೆಗಲ ಮ್ಯಾಲ ಹೊತ್ತಕೊಂಡ ಬರ್ತಿ. ಖರೇನ ಅಜೀಬ್ ಅನಿಸ್ತದಪಾ. ಆ ತುಂಬಿದ ಕೊಡ ಒಂದೇ ಕೈಯಾಗ ಹೆಂಗ ಇಳಿಸ್ತಿಯೋ ಮಾರಾಯ?’ ಒಂದೇ ಕೈಯಿಂದ ಅದನ್ನು ತನ್ನ ಹುರಿಗಟ್ಟಿದ ರಟ್ಟೆಯ ಮೇಲೆ ಸಾವಕಾಶ ಇಳಿಸುತ್ತ ಹಂಡೆಗೆ ಸುರಿಯುವುದನ್ನು ನೋಡಿ ಭೇಷ್ ಎನ್ನಬೇಕು. ಕೊಡವನ್ನು ಕಟ್ಟಿಬಿಡುವ ಕಲೆಯೂ ಹಾಗೆಯೆ. ಒಂದು ಅಂದಾಜಿನಂತೆಯೆ ಹಗ್ಗ ಉದ್ದ ಮಾಡಿಟ್ಟುಕೊಂಡು ಕಟ್ಟಿದ ಕೊಡವನ್ನು ರಪ್ಪನೆ ಬಾವಿಗೆ ಒಗೆಯುವನು. ಕ್ಷಣಮಾತ್ರದಲ್ಲಿ ಅದು ಬಾವಿಯ ಆಳದಲ್ಲಿರಬೇಕೆನ್ನುವುದು ಅವನ ಆಲೋಚನೆ.

ಉಳಿದವರು ಒಂದು ಕೊಡ ನೀರು ಜಗ್ಗುವಷ್ಟರಲ್ಲಿ ಆತ ನಾಲ್ಕು ಕೊಡ ಜಗ್ಗಿರುತ್ತಿದ್ದ. ಕಂಟಕ್ಕೆ ಕಟ್ಟಿದ ಹಗ್ಗದಿಂದಲೇ ಅದನ್ನು ಹಿಂದು ಮುಂದು ಮಾಡುವನು. ಮೇಲೆಕೆಳಗೆ ನೂಕುವನು. ಡುಬು ಡುಬು ಎಂದು ಅದು ತುಂಬಿಕೊಳ್ಳತೊಡಗಿತೆಂದರೆ ಸಾಕು, ಸರಕ್ಕನೆ ಹಗ್ಗ ಜಗ್ಗಿದಂತೆ ಮಾಡಿ, ಮತ್ತೆ ಜೋರಾಗಿ ಇಳಿಬಿಟ್ಟು, ಕೊಡವನ್ನೊಮ್ಮೆ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿಸಿ ಪೂರ್ತಿ ತುಂಬಿಕೊಂಡಿದ್ದು ಖಾತ್ರಿಯಾದ ಮೇಲೆ ಅಗದೀ ಸಸಾರ ಎಳೆದುಬಿಡುತ್ತಿದ್ದ. ಅವನು ಎಳೆಯುತ್ತಿರುವುದು ಹಗ್ಗವನ್ನಲ್ಲ, ದಾರವನ್ನು ಎಂಬಂತೆ ಇರುತ್ತಿತ್ತು. ಅಷ್ಟು ಸಸಾರ! ಇವನ ನೀರು ಸೇದುವ ಸದ್ದು ಕೇಳಿಯೇ ಅನೇಕರು ಏಳುತ್ತಿದ್ದರು. ಮಾಯಕ್ಕ ಒಂದೊಂದು ಸಲ ಬಾವಿಕಟ್ಟೆಯ ಮೇಲೆ ಕುಳಿತು ಅವನು ನೀರು ಜಗ್ಗುವುದನ್ನೇ ನೋಡುವಳು. ಅವನು ಸಾಲಾಗಿ ಇಡುವ ಕೊಡಗಳನ್ನು ದಿಟ್ಟಿಸುವಳು. ಥಳಥಳವೆನ್ನುವ ಹೊಳಪು ಬರುವ ಹಾಗೆ ನಾಗಣ್ಣ ಕೊಡಗಳನ್ನು ತಿಕ್ಕಿ ತೊಳೆಯುತ್ತಿದ್ದ. ಹುಣಿಸೆಹಣ್ಣಿನ ತೊಳೆಯಲ್ಲಿ ತೊಳೆದ ತಾಮ್ರದ ಕೊಡಗಳ ಹೊಳಪಿನಲ್ಲಿ ಮುಖ ನೋಡಿಕೊಳ್ಳಬಹುದಾಗಿದ್ದಿತು. ಕೊಡಗಳು ಕನ್ನಡಿಗಳಾಗುತ್ತಿದ್ದವು. ನೀರು ತುಂಬುವ, ಹೊರುವ, ಸುರಿಯುವ ಕಾಯಕದ ಮೂಲಕ ನಾಗಣ್ಣ ತನ್ನ ಸುತ್ತಲ ಲೋಕಕ್ಕೆ ಒಂದು ಸಂದೇಶ ಕೊಡುತ್ತಿದ್ದಾನೆಂದು ಮಾಯಕ್ಕಳಿಗೆ ಅನಿಸುವುದು. ತನ್ನ ಕಾಯಕದಲ್ಲಿ ಅವನಿಗೆ ಎಷ್ಟೊಂದು ಶ್ರದ್ಧೆ. ಅವನ ಹೆಗಲ ಮೇಲಿನ ನೀರಿನ ಕೊಡಗಳು ಬರೀ ಕೊಡಗಳಲ್ಲ, ಪ್ರೀತಿ ತುಂಬಿಟ್ಟುಕೊಂಡಿರುವ ಕೊಡಗಳು.

ನಂಬಿಕೆಯನ್ನು ಭದ್ರವಾಗಿ ತುಂಬಿಕೊಂಡಿರುವ ಕೊಡಗಳು. ಹೇಳಿದ ಕೆಲಸವನ್ನು, ಒಪ್ಪಿಸಿದ ಜವಾಬ್ದಾರಿಯನ್ನು ಶ್ರದ್ಧೆಯಿಂದ ಆತ ಮಾಡುತ್ತಾನೆ. ಹಾಗಾಗಿಯೇ ಮಾಯಕ್ಕಳಿಗೆ ಅವನೆಂದರೆ ಇಷ್ಟ. ಮಂದಿ ಏನೇ ಅಂದರೂ ಆತ ತಲೆ ಕೆಡಿಸಿಕೊಳ್ಳಲಿಲ್ಲ. ತಾನೂ ತಲೆ ಕೆಡಿಸಿಕೊಳ್ಳಲಿಲ್ಲ. ಅವನ ಮೇಲಿಟ್ಟಿದ್ದ ವಿಶ್ವಾಸವನ್ನು ಆತ ಎಂದೂ ಜರ್‍ರೆಂದು ಜಾರಿಸಲಿಲ್ಲ.

